# <u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

***Crl. Misc. 228/2023***

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ ಪಡೆದುಕೊಳ್ಳಲಾಯಿತು.
ದಿನಾಂಕ: 22-07-2025

ಹೆಸರು :- ಶಬಾನಾ

ಗಂಡನ ಹೆಸರು :- ಇಸ್ಮಾಯಿಲ

ವಯಸ್ಸು :- 30 ವರ್ಷ

ಉದ್ಯೋಗ :- ಮನೆಕೆಲಸ

ವಾಸಸ್ಥಳ :- ದುದನಿ, ತವರು ಮನೆ ದೇವರ ಗಾಣಗಾಪುರ

**<u>ಮೌಖಿಕ ವಿಚಾರಣೆ ಃ-</u>**

ನನ್ನ ಮದುವೆ ಎದುರುದಾರನೊಂದಿಗೆ 12 ವರ್ಷಗಳ ಹಿಂದೆ ಆಗಿರುತ್ತದೆ. ಮದುವೆ ಸಮಯದಲ್ಲಿ 5 ತೋಲೆ ಬಂಗಾರ ಮತ್ತು ಹಣವನ್ನು ನೀಡಿರುತ್ತೇವೆ.

1 ತಿಂಗಳು ನನ್ನನ್ನು ಚೆನ್ನಾಗಿ ನೋಡಿಕೊಂಡು ಆನಂತರ ಕಿರುಕುಳ ನೀಡಿ ಅನಂತರ ಮನೆಯಿಂದ ಹೊರಹಾಕಿರುತ್ತಾನೆ. ನನಗೆ ಇಬ್ಬರು ಜನ ಮಕ್ಕಳು ಇರುತ್ತಾರೆ. ನಾನು ಗರ್ಭವತಿಯಾಗಿದ್ದಾಗ ನನ್ನ ತವರು ಮನೆಯವರು ನನಗೆ 1 ಲಕ್ಷ ರೂ.ಗಳನ್ನು ಆಸ್ಪತ್ರೆಗಾಗಿ ಖರ್ಚು ಮಾಡಿರುತ್ತಾರೆ. ನನ್ನ ಮಕ್ಕಳು ಈಗ ನನ್ನೊಂದಿಗೆ ವಾಸವಾಗಿದ್ದು ಅವರಿಗೆ ಜೀವನ ಉಪಚಾರಕ್ಕಾಗಿ ಹಣದ ಅವಶ್ಯಕತೆ ಇರುತ್ತದೆ. ನಾವು ಎದುರುದಾರನಿಗೆ ಕೇಳಲು ಹೋದಾಗ ಆತನ ತಮ್ಮನು 5 ಲಕ್ಷ ರೂ. ತೆಗೆದುಕೊಂಡು ಬಾ ಎಂದು ಹೇಳಿರುತ್ತಾನೆ ಮತ್ತು ಸೀಮೆ ಎಣ್ಣೆ ಎರಚಿ ಹೊಡೆಯಲು ಬಂದಿರುತ್ತೇನೆ. ಸದರಿ ವಿಷಯವನ್ನು ಮಹಿಳಾ ಮಂಡಳಿಯವರಿಗೆ ತಿಳಿಸಿರುತ್ತೇನೆ. ಆ ನಂತರ ಮಹಿಳಾ ಮಂಡಳಿಯವರಿಗೆ ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಹೇಳಿ ಕರೆದುಕೊಂಡು ಹೋಗಿ 4 ದಿನ ಚೆನ್ನಾಗಿ ನೋಡಿಕೊಂಡು ಆ ನಂತರ ಮತ್ತೆ ಕಿರುಕುಳ ನೀಡಿರುತ್ತಾರೆ.

ಎದುರುದಾರನು ಪ್ರತಿ ತಿಂಗಳು 4 ಲಕ್ಷ ರೂ. ದುಡಿಯುತ್ತಾನೆ. ಮತ್ತು ಆತನು ಮಟಕಾ ನಂಬರ ಬರೆದುಕೊಳ್ಳುವ ಅಂಗಡಿಯನ್ನು ಇಟ್ಟಿರುತ್ತಾನೆ. ನಾನು ಎದುರುದಾರನಿಂದ ತಿಂಗಳಿಗೆ ರೂ. 50 ಸಾವಿರ ಜೀವನಾಶ ಕೋರುತ್ತೇನೆ. 50 ಸಾವಿರ ಜೀವನಾಂಶ ಕೊಡಲು ಎದುರುದಾರನು ಸಶಕ್ತನಿರುತ್ತಾನೆ.

ಈಗ ನನ್ನ ಮತ್ತು ನನ್ನ ಇಬ್ಬರು ಮಕ್ಕಳ ಜೀವನೋಪಚಾರಕ್ಕಾಗಿ ಎದುರುದಾರನಿಂದ ಜೀವನಾಂಶ ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಆದ್ದರಿಂದ ಸದರಿ ಅರ್ಜಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಪಾಟೀಸವಾಲುಃ ಎದುರುದಾರನು ಏಕಪಕ್ಷೀಯ ಆಗಿರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ